ಅಯ್ಯಂಗಾರರಿಗೆ ಸಂಸಾರ ತ್ಯಜಿಸಿ ಶ್ರೀಮಾತೆಯ ಬಳಿ ಸಂನ್ಯಾಸ ಸ್ವೀಕರಿಸಿ ಸಾಧನೆ–ಭಜನೆಯಲ್ಲಿ ಜೀವನಯಾಪನೆ ಮಾಡಬೇಕೆಂಬ ತೀವ್ರ ಇಚ್ಛೆಯಾಗಿತ್ತು. ತಮ್ಮ ಆಕಾಂಕ್ಷೆಯನ್ನು ಶ್ರೀಮಾತೆಯ ಮುಂದೆ ತಿಳಿಸಿದಾಗ ಅವರು ಸ್ವಲ್ಪ ಕಾಲ ಕಾಯಲು ಹೇಳಿದರು. ಅನಂತರ ಅಯ್ಯಂಗಾರರ ಆಗ್ರಹ ಮತ್ತು ತೀವ್ರ ವ್ಯಾಕುಲತೆಯನ್ನು ನೋಡಿ, ವಸ್ತ್ರಪ್ರದಾನ ಮಾಡಿ, ಅಂತರಂಗ ಸಂನ್ಯಾಸಕ್ಕೆ ಅನುಮತಿಯಿತ್ತರು. ಒಂದೆರಡು ವರ್ಷ ಬಾಕಿ ಇದ್ದ ಸರ್ಕಾರಿ ನೌಕರಿಯನ್ನು ಪೂರೈಸಿ ನಿವೃತ್ತರಾದ ಮೇಲೆ ಸ್ವಾಮಿ ಬ್ರಹ್ಮಾನಂದರ ಬಳಿ ವಿಧಿಪೂರ್ವಕವಾಗಿ ಸಂನ್ಯಾಸ ಸ್ವೀಕರಿಸಲು ಆದೇಶವಿತ್ತರು. ಇದಾಗಿ ಒಂದೆರಡು ದಿನಗಳಲ್ಲೇ ಕಛೇರಿಗೆ ಹಿಂದಿರುಗಬೇಕೆಂದು ಟೆಲಿಗ್ರಾಂ ಬಂತು. ಶ್ರೀಮಾತೆಯ ಹತ್ತಿರವೇ ಇನ್ನೂ ಕೆಲವು ದಿನಗಳು ಇರಬೇಕೆಂಬುದು ಅಯ್ಯಂಗಾರರ ಬಯಕೆ. ಶ್ರೀಮಾತೆಯವರೇ ಒತ್ತಾಯ ಮಾಡಿ ಅವರನ್ನು ವಾಪಸ್ಸು ಕಳಿಸಿದರು. ಬೆಂಗಳೂರಿಗೆ ಹೋಗಿ ತಮ್ಮ ಸರ್ಕಾರಿ ಕರ್ತವ್ಯಕ್ಕೆ ಮತ್ತೆ ಸೇರಿದ ನಂತರ ಅಯ್ಯಂಗಾರರು ಶ್ರೀಮಾತೆಯವರಿಗೆ ಹೀಗೆ ಪತ್ರ ಬರೆದರು: “ಅಮ್ಮಾ, ನಿಮ್ಮ ಆದೇಶದಂತೆ ಕಛೇರಿ ಕೆಲಸಕ್ಕೆ ಮತ್ತೆ ಸೇರಿದ್ದೇನೆ. ವೇತನವೂ ಹೆಚ್ಚಿದೆ. ಆದರೆ ಆಫೀಸಿಗೆ ಹೋಗಲಾಗುತ್ತಿಲ್ಲ. ಕಾರಣ, ಅಂದು ಕೋಯಲ್‌ಪಾರಾದಲ್ಲಿ ಕೊಳದಲ್ಲಿಳಿದು ತಾವರೆ ಹೂವುಗಳನ್ನು ಕೀಳಲು ಹೋದಾಗ ಮುಳ್ಳಿನಿಂದ ಮೈಯೆಲ್ಲಾ ಚುಚ್ಚಿ ಗಾಯವಾಗಿದೆ.” ಪತ್ರ ತಲುಪಿದ ಮರುದಿನವೇ ಶ್ರೀಮಾತೆ ಜಯರಾಂಬಾಟಿಯ ಸಿಂಹವಾಹಿನಿ ಮಂದಿರದ ಮೃತ್ತಿಕೆಯನ್ನು ಅಯ್ಯಂಗಾರರ ವಿಳಾಸಕ್ಕೆ ಪಾರ್ಸೆಲ್ ಮಾಡಿ ಕಳಿಸಿದರು. ಅದನ್ನು ನೀರಿನಲ್ಲಿ ಕರಗಿಸಿ ಗಾಯಕ್ಕೆ ಲೇಪನ ಮಾಡಲು ಹೇಳಿ ಕಾಗದ ಬರೆಸಿದರು.

ಕೋಯಲ್‌ಪಾರಾದಲ್ಲಿದ್ದಾಗ ಅಯ್ಯಂಗಾರರು ಅಕ್ಕಪಕ್ಕದಲ್ಲಿ ಇರುವ ಜಲಾಶಯಗಳಿಂದ ಪದ್ಮಗಳನ್ನು ಸಂಗ್ರಹಿಸಿ ಶ್ರೀಮಾತೆಯನ್ನು ಎಷ್ಟೋ ಸಾರಿ ಪೂಜಿಸಿದ್ದರು. ಅವರು ಶ್ರೀಮಾತೆಯ ಸೇವಕರಾದ ಈಶಾನಾನಂದರೊಡನೆ ಒಂದು ದಿನ ಮಧ್ಯಾಹ್ನ ಮಾತುಕತೆಯಾಡುತ್ತ ಹೀಗೆ ಹೇಳಿದರು: “ಸೋದರ! ನೀವೆಲ್ಲಾ ಪದ್ಮವನದಲ್ಲಿರುವ ಭ್ರಮರಗಳಂತೆ. ಶ್ರೀಮಾತೆಯವರ ಸುತ್ತಮುತ್ತ ಸರ್ವದಾ ಇದ್ದು ಎಷ್ಟು ಆನಂದದಿಂದ ಅವರಿಗೆ ಸೇವೆ ಸಲ್ಲಿಸುತ್ತಿದ್ದೀರಿ! ನೀವೇ ಧನ್ಯರು. ನಿಮ್ಮನ್ನು ನೋಡಿ ನನಗೆ ಅಸೂಯೆಯಾಗುತ್ತಿದೆ.” ಅದಕ್ಕೆ ಈಶಾನಾನಂದರು ಹೀಗೆ ಉತ್ತರಿಸಿದರು: “ನೀವೇ ಧನ್ಯರೇ ಹೊರತು ನಾವಲ್ಲ! ನಿಮ್ಮಂಥ ಅನೇಕ ಭ್ರಮರಗಳು ಎಷ್ಟೋ ದೂರದಿಂದ ಬಂದು ಮಧುಪಾನ ಮಾಡಿ ಆನಂದದಿಂದ ಮತ್ತರಾಗಿ ಹೋಗುತ್ತವೆ. ಆದರೆ ಇದೇ ಪದ್ಮವನದಲ್ಲೇ ಹುಟ್ಟಿ ಬೆಳೆದ ಕಪ್ಪೆಗಳು ಎಲೆಗಳಿಂದ ಹೂವಿಗೆ ನೆಗೆದಾಡುತ್ತಿರುತ್ತವೆ, ಅಷ್ಟೇ! ಅವಕ್ಕೆ ಪದ್ಮಗಳ ಮಹತ್ವದ ಅರಿವೂ ಇಲ್ಲ, ಮಧುಪಾನದ ರುಚಿಯೂ ತಿಳಿಯದು. ನಾವೆಲ್ಲಾ ಆ ಜಾತಿಗೆ ಸೇರಿದವರು!” ಅಂದು ಸಂಜೆ ಅಯ್ಯಂಗಾರರು ಶ್ರೀಮಾತೆಯವರಿಗೆ ಈ ಮಾತುಕತೆಯ ವಿವರವನ್ನು ತಿಳಿಸಿದಾಗ ಅವರು ಹೇಳಿದರು: “ನನ್ನ ಸಾನ್ನಿಧ್ಯದಲ್ಲಿದ್ದು ಇವರೆಲ್ಲಾ ಈಗ ಮತ್ತರಾಗಿಬಿಟ್ಟಿದ್ದಾರೆ. ಇದರ ಮಹತ್ವ ಇವರಿಗೆ ಈಗ ಹೇಗೆ ತಾನೇ ಅರ್ಥವಾಗುತ್ತದೆ!”

ಮುಂದೆ ಅಯ್ಯಂಗಾರರು ವಿಧಿಪೂರ್ವಕವಾಗಿ ಸಂನ್ಯಾಸ ಗ್ರಹಣಮಾಡಿ ‘ಸ್ವಾಮಿ ಶ್ರೀವಾಸಾನಂದ’ ಎಂಬ ಹೆಸರಿನಿಂದ ಪ್ರಸಿದ್ಧರಾದರು. ತಮ್ಮ ನಿವೃತ್ತಿವೇತನವನ್ನು ಕುಟುಂಬಕ್ಕೆ ಮತ್ತು ಸತ್ಕಾರ್ಯಕ್ಕಾಗಿ ಹೇಗೆ, ಎಷ್ಟೆಷ್ಟು ಖರ್ಚು ಮಾಡಬೇಕೆಂಬುದನ್ನು ಶ್ರೀಮಾತೆಯವರೇ ತಿಳಿಸಿದ್ದರು. ಸ್ವಾಮಿ ಶ್ರೀವಾಸಾನಂದರು ದೊಡ್ಡ ಪಂಡಿತರು. ಆ ಕಾಲದಲ್ಲೇ, ಅವರಿಂದ ಇಂಗ್ಲಿಷ್ ಮತ್ತು ಇತರ ವಿಷಯಗಳನ್ನು ಕಲಿಯಲು ಬ್ರಹ್ಮಚಾರಿ, ಸಾಧುಗಳಿಗೆ ಶ್ರೀಮಾತೆ ಸೂಚಿಸಿದ್ದರು. ಭವಿಷ್ಯದಲ್ಲಿ ದೇಶವಿದೇಶಗಳಿಂದ ಭಕ್ತರು ಬಂದಾಗ ಅವರೊಟ್ಟಿಗೆ ಸಂಭಾಷಿಸಲು ಇದು ಅವಶ್ಯಕವೆಂದು ಶ್ರೀಮಾತೆ ಈ ಸಲಹೆ ನೀಡಿದ್ದರು.

ತಾವು ಕೋಯಲ್‌ಪಾರಾದಲ್ಲಿದ್ದಾಗ ರಾಧುವಿನ ಚಿಕಿತ್ಸೆಗಾಗಿ ತುಂಬ ಹಣ ಖರ್ಚಾಗುತ್ತಿದ್ದುದನ್ನು ನೋಡಿ, ಅಯ್ಯಂಗಾರರು ತಿಂಗಳಿಗೆ ೧೦೦ ರೂಪಾಯಿ ಧನಸಹಾಯ ಮಾಡುತ್ತಿದ್ದರು. ಹಿಂದಿರುಗಬೇಕಾದಾಗ ಶ್ರೀಮಾತೆಗೆ, “ಅಮ್ಮ, ನಿಮಗೆ ಯಾವಾಗ ಹಣದ ಆವಶ್ಯಕತೆ ಬಿದ್ದರೂ ಸಂಕೋಚಪಡದೆ ದಯವಿಟ್ಟು ತಿಳಿಸಿ” ಎಂದು ಪ್ರಾರ್ಥಿಸಿಕೊಂಡಿದ್ದರು. ಆ ಕಾಲದಲ್ಲಿ ಸಾಮಾನು ಸರಂಜಾಮುಗಳ ಬೆಲೆ ಹೆಚ್ಚಾಗಿ ಹಣದ ಅಭಾವವಿತ್ತು. ಈ ಮಧ್ಯೆ ಸ್ವಾಮಿ ಶಾರದಾನಂದಜಿ ಹಣವನ್ನು ಸಂಗ್ರಹಿಸಿ ಕಳಿಸಿಕೊಡುವುದು ನಿಧಾನವಾಗುತ್ತದೆಂದು ಶ್ರೀಮಾತೆಯವರಿಗೆ ಪತ್ರ ಬರೆದು ತಿಳಿಸಿದರು. ಎಷ್ಟೇ ಹಣದ ಅಭಾವವಿರಲಿ, ಶ್ರೀಮಾತೆ ಎಂದೂ ಯಾರ ಮುಂದೆಯೂ ಕೈಚಾಚಿದವರಲ್ಲ. “ಎಂದೂ ಯಾರ ಮುಂದೂ ಒಂದು ಕಾಸಿಗಾಗಿಯೂ ಕೈಚಾಚಬೇಡ. ಕೈಯೊಡ್ಡಿದರೆ ನಿನ್ನ ಸ್ವಾತಂತ್ರ್ಯಕ್ಕೇ ಹಾನಿಯಾದಂತೆ” ಎಂದು ದೇಹತ್ಯಾಗ ಮಾಡುವ ಮುಂಚೆ ಶ್ರೀರಾಮಕೃಷ್ಣರು ಅವರಿಗೆ ನಿರ್ದೇಶನವಿತ್ತಿದ್ದರು. “ಈಗ ಈ ರಾಧಿಗಾಗಿ ಈ ಆದೇಶವನ್ನು ಉಪೇಕ್ಷಿಸಿ ಕೈಯೊಡ್ಡಬೇಕೆ?” ಎಂದು ಶ್ರೀಮಾತೆ ಬಹಳ ಚಿಂತಾಕ್ರಾಂತರಾದರು.

ಇದಾದ ಒಂದೆರಡು ದಿನಗಳ ನಂತರ ಬೆಂಗಳೂರಿನ ರಾಮಕೃಷ್ಣ ಆಶ್ರಮದ ಅಧ್ಯಕ್ಷರಾಗಿದ್ದ ಸ್ವಾಮಿ ನಿರ್ಮಲಾನಂದರು ಶ್ರೀಮಾತೆಗೆ ವಿಜಯದಶಮಿಯ ಶುಭಸಂದರ್ಭದಲ್ಲಿ ಪ್ರಣಾಮಗಳನ್ನು ತಿಳಿಸಿದ ಪತ್ರ ತಲಪಿತು. ತಮ್ಮ ಆಶೀರ್ವಾದವನ್ನು ಪತ್ರದ ಮೂಲಕ ಅವರಿಗೆ ತಿಳಿಸುವಂತೆ ಶ್ರೀಮಾತೆ ತಮ್ಮ ಅನುಚರರಿಗೆ ಹೇಳಿದರು. ಸೇವಕರಾದ ಈಶಾನಾನಂದರು ಆ ಪತ್ರದಲ್ಲಿ ಅಲ್ಲಿನ ಆರ್ಥಿಕ ಪರಿಸ್ಥಿತಿಯನ್ನು ಕುರಿತು ಬರೆದು ತಿಳಿಸಿದರು. ಸ್ವಾಮಿ ನಿರ್ಮಲಾನಂದರ ಮೂಲಕ ಈ ವಿಷಯ ತಿಳಿದ ತಕ್ಷಣವೇ ನಾರಾಯಣ ಅಯ್ಯಂಗಾರರು ಮತ್ತೆ ನಿಯಮಿತವಾಗಿ ಧನಸಹಾಯ ಮಾಡಲಾರಂಭಿಸಿದರು.

(ಮುಂದುವರಿಯುವುದು)

# ಶ್ರೀಶಾರದಾಮಠದ ಐತಿಹಾಸಿಕ ಮಹತ್ವ

ಕುಮಾರಿ ಸ್ವರ್ಣಗೌರಿ



ದಕ್ಷಿಣೇಶ್ವರದಲ್ಲಿರುವ ಶಾರದಾಮಠದ ಪ್ರಧಾನಕೇಂದ್ರ

"ಒಂದು ಜನಾಂಗದವರು ಎಷ್ಟರಮಟ್ಟಿಗೆ ಮುಂದುವರಿದಿದ್ದಾರೆ ಎನ್ನುವುದಕ್ಕೆ ಅವರು ತಮ್ಮ ಮಹಿಳೆಯರನ್ನು ಹೇಗೆ ನೋಡಿಕೊಳ್ಳುತ್ತಾರೆ ಎಂಬುದೇ ಒರೆಗಲ್ಲು" ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ಮನುಸ್ಮೃತಿ ಯಲ್ಲಿಯೂ ಇದನ್ನೇ ಹೋಲುವ ಒಂದು ಮಾತಿದೆ: "ಎಲ್ಲಿ ಸ್ತ್ರೀಯರನ್ನು ಪೂಜ್ಯ ದೃಷ್ಟಿಯಿಂದ ನೋಡುವರೋ ಅಲ್ಲಿ ದೇವತೆಗಳು ಸಂತುಷ್ಟರಾಗುತ್ತಾರೆ."

ಸ್ವಾಮಿ ವಿವೇಕಾನಂದರಿಗೆ ಸ್ತ್ರೀಶಕ್ತಿಯಲ್ಲಿ ಅಪಾರ ಭರವಸೆ ಇತ್ತು. ಅದರಲ್ಲೂ ಭಾರತೀಯ ನಾರಿಯರ ಸಾಮರ್ಥ್ಯದಲ್ಲಿ ತುಂಬ ನಂಬಿಕೆ ಇತ್ತು. ಇಂಥ ವಿಶ್ವಾಸದ ಮಾತುಗಳನ್ನು ಅವರು ಹಲವು ಕಡೆಗಳಲ್ಲಿ ಆಡಿರುವುದು ಕಂಡುಬರುತ್ತದೆ. ಅವುಗಳಲ್ಲಿ ಕೆಲವನ್ನು ಈಗ ನೋಡೋಣ: "ಭಾರತವನ್ನು ಗೆಲ್ಲಲು ಐನೂರು ಪುರುಷರಿಗೆ ಐವತ್ತು ವರ್ಷಗಳು ಬೇಕಾಗುತ್ತವೆ; ಆದರೆ ಅಷ್ಟೇ ಸಂಖ್ಯೆಯ ಸ್ತ್ರೀಯರಿಗೆ ಕೆಲವೇ ವಾರಗಳು ಸಾಕು"; "ತಮಗೆ ತೋಚಿದ ರೀತಿಯಲ್ಲಿಯೇ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬಲ್ಲ ಸ್ಥಿತಿಯಲ್ಲಿ ಸ್ತ್ರೀಯನ್ನು ನಾವು ಇಡಬೇಕು. ಬೇರೆ ಯಾರೂ ಅವರಿಗೆ ಇದನ್ನು ಮಾಡಲಾರರು, ಮಾಡಲೂಕೂಡದು. ನಮ್ಮ ಭಾರತೀಯ ಸ್ತ್ರೀಯರು ಜಗತ್ತಿನ ಇತರ ಸ್ತ್ರೀಯರಷ್ಟೇ ಇದನ್ನು ಸಾಧಿಸಲು ಸಮರ್ಥರು" ; "ನಮ್ಮ ಸ್ತ್ರೀಯರ ಬುದ್ಧಿ ಬೆಳವಣಿಗೆಗೆ ಅವಕಾಶ ಕೊಟ್ಟರೆ ಭಾರತದ ಭವಿಷ್ಯನಾರಿಯು ಇಡೀ ವಿಶ್ವಕ್ಕೇ ಆದರ್ಶವಾಗುವಳು."

ಸ್ವಾಮಿ ವಿವೇಕಾನಂದರು, "ಬೆಳವಣಿಗೆಗೆ ಸ್ವಾತಂತ್ರ್ಯವೇ ಪ್ರಥಮ ಆವಶ್ಯಕತೆ" ಎಂದು ಹೇಳುತ್ತಿದ್ದರು. ಮಹಿಳೆಯರ, ಅದರಲ್ಲೂ ವಿಧವೆಯರ, ಸಮಸ್ಯೆಗಳನ್ನು ಹೇಗೆ ಬಗೆಹರಿಸುವಿರಿ ಎಂದು ಯಾರಾದರೂ ಕೇಳಿದರೆ, "ನಾನೇನು ವಿಧವೆಯೆ? ನಾನೇನು ಮಹಿಳೆಯೇ? ಪುನಃ ಪುನಃ ಈ ಪ್ರಶ್ನೆಯನ್ನು ಕೇಳುತ್ತೀರಲ್ಲಾ? ಮಹಿಳೆಯರ ಸಮಸ್ಯೆಯನ್ನು ಬಗೆಹರಿಸಲು ನೀವು ಯಾರು? ಪ್ರತಿಯೊಬ್ಬ ವಿಧವೆಯನ್ನೂ, ಮಹಿಳೆಯನ್ನೂ ಆಳುವುದಕ್ಕೆ ನೀವೇನು ದೇವರೇ? ಬದಿಗೆ ಸರಿಯಿರಿ! ಅವರು ತಮ್ಮ ಸಮಸ್ಯೆಯನ್ನು ತಾವೇ ಬಗೆಹರಿಸಿಕೊಳ್ಳುವರು" ಎಂದು ಸ್ವಾಮೀಜಿ ಗುಡುಗುತ್ತಿದ್ದರು. ಬೆಳವಣಿಗೆಯ ವಿಚಾರದಲ್ಲಿ ಸ್ವಾಮೀಜಿಯವರ ಈ ಅಭಿಪ್ರಾಯ ಸೂಕ್ತ ಹಾಗೂ ಸಮಂಜಸವಾದುದು. ಬೀಜದ ಬೆಳವಣಿಗೆಗೆ ನಾವು ಮಣ್ಣು, ನೀರು, ಗಾಳಿ, ಗೊಬ್ಬರ ಮುಂತಾದ ಸಾಮಗ್ರಿಗಳನ್ನು ಒದಗಿಸಬಹುದು. ಬೀಜ ಮಾತ್ರ ತನ್ನ ಸ್ವಭಾವಕ್ಕೆ ಅನುಗುಣವಾಗಿ ತನಗೆ ಬೇಕಾದುದನ್ನು ಹೀರಿ ಜೀರ್ಣಿಸಿಕೊಂಡು ತನ್ನ ನಿಯಮದಂತೆ ಬೆಳೆಯುತ್ತದೆ. ಸ್ತ್ರೀಯರು ಎದುರಿಸುತ್ತಿರುವ ದಾರುಣ ಸಮಸ್ಯೆಗಳಿಗೆ ವಿದ್ಯಾಭ್ಯಾಸವೆಂಬ ಪೋಷಕಸಾಮಗ್ರಿಯನ್ನು ಒದಗಿಸುವುದಷ್ಟೇ ನಮ್ಮ ಕರ್ತವ್ಯ. "ವಿದ್ಯಾಭ್ಯಾಸವೆಂಬ ಮಂತ್ರದಿಂದ ಬಗೆಹರಿಯದ

ಶ್ರೀಮಾತೆಯವರ ದಿವ್ಯ ವ್ಯಕ್ತಿತ್ವವನ್ನೇ ಕೇಂದ್ರವಾಗಿಟ್ಟುಕೊಂಡು ಇರುವ ಸ್ತ್ರೀಯರ ಮಠವೇ ಶ್ರೀಶಾರದಾಮಠ. ಸ್ವಾಮಿ ವಿವೇಕಾನಂದರು ಇದರ ಬಗ್ಗೆ ಮಾಡಿದ ಆಲೋಚನೆಗಳು ಮತ್ತು ಅವು ಸಾಕಾರಗೊಂಡ ಬಗೆಯನ್ನು ಮನೋಜ್ಞವಾಗಿ ವಿವರಿಸಿರುವ ಲೇಖಕಿ ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಭಕ್ತರು. ಇವರ ಹಲವಾರು ಲೇಖನಗಳು ಈ ಪತ್ರಿಕೆಯಲ್ಲಿ ಪ್ರಕಟವಾಗಿವೆ.

ಸಮಸ್ಯೆ ಯಾವುದೂ ಇಲ್ಲ" ಎನ್ನುತ್ತಿದ್ದರು, ಸ್ವಾಮಿ ವಿವೇಕಾನಂದರು. ಅವರ ಪ್ರಕಾರ ವಿದ್ಯೆಯೆಂದರೆ ಕೇವಲ ಮಾಹಿತಿಗಳ ಸಂಗ್ರಹವಲ್ಲ. ನಮ್ಮಲ್ಲಿರುವ ಪರಿಪೂರ್ಣತೆಯ ವಿಕಸನವನ್ನೇ ಅವರು ವಿದ್ಯಾಭ್ಯಾಸವೆಂದು ಕರೆಯುತ್ತಾರೆ. ಇಚ್ಛಾಶಕ್ತಿಯನ್ನು ಸರಿಯಾದ ಮತ್ತು ಸಮರ್ಥವಾದ ರೀತಿಯಲ್ಲಿ ಬಳಸುವಂತೆ ತರಬೇತಿ ನೀಡುವುದೇ ವಿದ್ಯಾಭ್ಯಾಸದ ವಿಧಾನ. "ನಾವು ಭರತಖಂಡದ ಕಾರ್ಯರಂಗಕ್ಕೆ ನಿರ್ಭೀತರಾದ ಮಹಾನ್ ಸ್ತ್ರೀಯರನ್ನು ತರಬೇಕು. ಸಂಘಮಿತ್ರೆ, ಲೀಲಾ, ಅಹಲ್ಯಾಬಾಯಿ, ಮೀರಾಬಾಯಿ ಮುಂತಾದವರ ಪರಂಪರೆಗೆ ಸೇರಲು ಸಮರ್ಥರಾದವರು ಮುಂದೆ ಬರಬೇಕು. ಅವರು ಮಹಾನಾಯಕರ ತಾಯಂದಿರಾಗುವುದಕ್ಕೆ ಯೋಗ್ಯರಾಗಿರಬೇಕು" ಎಂದು ಸ್ವಾಮೀಜಿ ಆಶಿಸಿದ್ದರು.

ಮಹಿಳೆಯರ ಪರಿಸ್ಥಿತಿ ಸುಧಾರಿಸದ ಹೊರತು ಭಾರತದೇಶದ ಉದ್ಧಾರ ದುಸ್ಸಾಧ್ಯವೆಂದು ಸ್ವಾಮೀಜಿ ನಂಬಿದ್ದರು. ಅದಕ್ಕಾಗಿ ಅವರಿಗೇ ಮೀಸಲಾದ ಒಂದು ಮಠವನ್ನು ಪ್ರಾರಂಭಿಸಬೇಕೆಂದು ಅವರು ಕನಸು ಕಂಡಿದ್ದರು. ಹಾಗೂ ಅದನ್ನು ನನಸಾಗಿಸಲು ಬಹಳವಾಗಿ ಪ್ರಯತ್ನಪಟ್ಟರು. ಸ್ವಾಮಿ ವಿವೇಕಾನಂದರು ೧೮೯೪ರಿಂದ ೧೯೦೧ರವರೆಗೆ ಬರೆದ ಪತ್ರಗಳಲ್ಲಿ ಈ ಬಗೆಯ ಮಠದ ಆವಶ್ಯಕತೆಯನ್ನು ಕುರಿತು ಅನೇಕ ಕಡೆ ಪ್ರಸ್ತಾಪ ಮಾಡಿದ್ದಾರೆ.

ಸ್ವಾಮಿ ರಾಮಕೃಷ್ಣಾನಂದರಿಗೆ ಅಮೆರಿಕಾದಿಂದ ೧೮೯೫ರಲ್ಲಿ ಬರೆದ ಪತ್ರವೊಂದರಲ್ಲಿ ಸ್ವಾಮೀಜಿ ತಮ್ಮ ಹೃದಯದ ಅಭಿಲಾಷೆಯನ್ನು ಹೀಗೆ ವ್ಯಕ್ತಪಡಿಸಿದ್ದಾರೆ: "ನನ್ನ ಮೊದಲ ಪ್ರಯತ್ನವೇ ಸ್ತ್ರೀಯರಿಗಾಗಿ ಒಂದು ಮಠವನ್ನು ಸ್ಥಾಪಿಸಬೇಕೆಂಬುದು. ಈ ಮಠದಿಂದ ಗಾರ್ಗಿ, ಮೈತ್ರೇಯಿಯರಂತಹ ನಾರೀರತ್ನಗಳು ಹೊರಬರುವವು. ಅವರನ್ನು ಮೀರಿದವರೂ ಭವಿಷ್ಯದಲ್ಲಿ ಬರುತ್ತಾರೆ." ನಮ್ಮ ದೇಶ ಹಿಂದುಳಿದಿರುವುದಕ್ಕೆ ಕಾರಣ, ಇಲ್ಲಿ 'ಶಕ್ತಿ'ಗೆ ಗೌರವವಿಲ್ಲದಿರುವುದು. ಶಕ್ತಿಸ್ವರೂಪಿಗಳಾದ ಮಹಿಳೆಯರ ಅಭಿವೃದ್ಧಿಯಾಗದೆ ಏನನ್ನೂ ಸಾಧಿಸುವುದಕ್ಕೆ ಸಾಧ್ಯವಿಲ್ಲ ಎಂಬುದನ್ನು ಅಮೆರಿಕ, ಯೂರೋಪು ಖಂಡಗಳಲ್ಲಿ ಸಂಚರಿಸಿ ಅನುಭವ ಪಡೆದ ಸ್ವಾಮೀಜಿ ಮನಗಂಡರು. ಆ ದೇಶಗಳು ಸಂಪದ್ಭರಿತವಾಗಿರುವುದಕ್ಕೆ ಶಕ್ತಿಯ ಆರಾಧನೆಯೇ ಕಾರಣವೆಂದು ಅವರು ನಿಚ್ಚಳವಾಗಿ ಕಂಡುಕೊಂಡರು. ಇದರಿಂದ ಸ್ವಾಮೀಜಿಗೆ ಶ್ರೀಶಾರದಾದೇವಿಯವರ ಜೀವಿತದ ಉದ್ದೇಶ ಮತ್ತು ಮಹತ್ವವು ಮತ್ತಷ್ಟು ಸ್ಪಷ್ಟವಾಗಿ ಗೋಚರವಾಯಿತು.

ಹಾಗೆಂದೇ ಅವರು ಶ್ರೀಮಾತೆಯವರಿಗಾಗಿ ಒಂದು ನಿವಾಸವನ್ನು ಕಟ್ಟಲು ₹೭,೦೦೦ಗಳನ್ನು ಅಮೆರಿಕೆಯಿಂದ ಕಳಿಸಿಕೊಟ್ಟರು. ಅಷ್ಟಲ್ಲದೆ ಮಹಿಳೆಯರ ಸಂಸ್ಥೆಗಾಗಿ ಒಂದು ಸ್ಥಳವನ್ನು ಕೊಂಡುಕೊಳ್ಳುವಂತೆ ಸ್ವಾಮಿ ಶಿವಾನಂದರಿಗೆ ೧೮೯೪ರಲ್ಲಿ ಒಂದು ಪತ್ರ ಬರೆದರು. ಈ ಸಂಸ್ಥೆಯ ನಿರ್ವಹಣೆಗಾಗಿ ವರ್ಷಕ್ಕೆ ₹೬,೦೦೦ ವರಮಾನ ಅವಶ್ಯಕವೆಂದೂ ಆಲೋಚಿಸಿದರು. ಮೇಲೆ ಉಲ್ಲೇಖಿಸಿದ ಪತ್ರದಲ್ಲಿಯೇ ತಮ್ಮ ಮನಸ್ಸಿನಾಳದಲ್ಲಿ ಹುದುಗಿದ್ದ ಆಶಯವನ್ನು ಅವರು ಹೀಗೆ ಪ್ರಕಟಮಾಡುತ್ತಾರೆ: "ಶಕ್ತಿಯ ಆರಾಧನೆಯನ್ನು ಪುನಃಸ್ಥಾಪನೆ ಮಾಡುವುದಕ್ಕಾಗಿಯೇ ಶ್ರೀಶಾರದಾದೇವಿಯವರು ಜನ್ಮವೆತ್ತಿದ್ದರು. ಅವರನ್ನು ಕೇಂದ್ರವಾಗಿಟ್ಟುಕೊಂಡು, ಗಾರ್ಗಿ, ಮೈತ್ರೇಯಿಯಂತಹ ವ್ಯಕ್ತಿಗಳು ಮತ್ತೊಮ್ಮೆ ಈ ಜಗತ್ತಿನಲ್ಲಿ ಜನ್ಮಧಾರಣೆ ಮಾಡುವರು. ಹಾಗೆಂದೇ ಶ್ರೀಮಾತೆಯವರಿಗಾಗಿ ಮೊದಲು ಮಠವನ್ನು ಕಟ್ಟಿಕೊಡಬೇಕು. ಮೊದಲು ತಾಯಿ ಮತ್ತು ಆಕೆಯ ಹೆಣ್ಣುಮಕ್ಕಳು. ಅನಂತರ ತಂದೆ ಮತ್ತು ಗಂಡುಮಕ್ಕಳು... ನನಗೆ ತಾಯಿಯ ಆಶೀರ್ವಾದ ತಂದೆಯ ಅನುಗ್ರಹಕ್ಕಿಂತಲೂ ಲಕ್ಷ ಪಾಲು ಶ್ರೇಯಸ್ಕರ."

ತಮ್ಮ ಕನಸನ್ನು ನನಸಾಗಿಸಲು ಸ್ವಾಮೀಜಿ ಅತ್ಯಂತ ಪರಿಶ್ರಮಪಟ್ಟರು. ಶ್ರೀಮಾತೆಯವರನ್ನು ಕೇಂದ್ರವಾಗಿಟ್ಟುಕೊಂಡು ಸ್ಥಾಪಿತವಾಗುವ ಮಠವು ಗಂಗೆಯ ಪೂರ್ವತೀರದಲ್ಲಿ ಇರುವುದೆಂದು ಹೇಳಿ, ಆ ಸ್ಥಳವನ್ನು ಸಹ ಗುರುತು ಮಾಡಿ ತೋರಿಸಿದ್ದರು. ಆದರೆ ಸ್ವಾಮೀಜಿಯವರ ಜೀವಿತಾವಧಿಯಲ್ಲಿ ಮಠದ ಸ್ಥಾಪನೆ ಕಾರ್ಯಗತವಾಗಲಿಲ್ಲ.

ಸ್ವಾಮೀಜಿಯವರ ಆಶೆ ಸಾಕಾರಗೊಳ್ಳಲು ಇನ್ನೂ ಬಹಳ ವರ್ಷ ಬೇಕಾಯಿತು. ಕಡೆಗೆ ೧೯೫೪ ರ ಡಿಸೆಂಬರ್ ೨ ರಂದು 'ಶ್ರೀಶಾರದಾಮಠ' ಅಸ್ತಿತ್ವಕ್ಕೆ ಬಂದಿತು. ಅವರು ಗುರುತುಮಾಡಿದ ಸ್ಥಳದಲ್ಲಿಯೇ ಭವ್ಯ ಕಟ್ಟಡವು ತಲೆಯೆತ್ತಿತು, ಕೂಡ. ಶ್ರೀಶಾರದಾಮಠ ೧೯೫೪ರಿಂದ ೧೯೫೮ರವರೆಗೆ ಬೇಲೂರುಮಠದ ಅಧೀನದಲ್ಲಿತ್ತು. ೧೯೫೯ ರ ಆಗಸ್ಟ್ ೨೬ ರಂದು ಅದು ಒಂದು ಸ್ವತಂತ್ರ ಸಂಸ್ಥೆಯಾಗಿ ಕಾರ್ಯನಿರ್ವಹಿಸತೊಡಗಿತು. "ಸ್ತ್ರೀಯರಲ್ಲಿ ಒಬ್ಬಳು ಮಾತ್ರವೇ ಬ್ರಹ್ಮಜ್ಞಾನಿಯಾದರೂ, ಆಕೆಯ ವ್ಯಕ್ತಿತ್ವದ ಪ್ರಭಾವದಿಂದ ಸಾವಿರಾರು ಮಂದಿ ಸ್ಫೂರ್ತಿಹೊಂದಿ,